ತುಮಕೂರಿಗೆ ತೆಂಗು ಪಾರ್ಕ್ ಭಾಗ್ಯ?

ಈ ಬಜೆಟ್‌ನಲ್ಲಿ ಸಿಗಲಿದೆಯೇ ಬಂಪರ್ ಕೊಡುಗೆ । ರೈತರ ಸಂಕಷ್ಟಕ್ಕೆ ಸಂಜೀವಿನಿ ಆಗುವರೆ ಸಿಎಂ?

■ ಶಶಿಧರ್ ಎಸ್.ದೋಣಿಹಕ್ಲು ತುಮಕೂರು
shashidara.ds@timesofindia.com

ರಾಜ್ಯ ಬಜೆಟ್‌ನಲ್ಲಿ ಬೆಂಗಳೂರಿನ ಉಪನಗರಿ ತುಮಕೂರು ಅಭಿವೃದ್ಧಿಗೆ ಹೊಸ ಯೋಜನೆಗಳ ನಿರೀಕ್ಷೆಯಿದೆ. ಯುಗಾದಿ ಹೊಸ್ತಿಲಲ್ಲಿ ಈ ಬಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಯವ್ಯಯದಲ್ಲಿ ತುಮಕೂರಿಗೆ ಹೊಸ ಯೋಜನೆಗಳನ್ನು ಘೋಷಿಸುವ ಭರವಸೆಯಿದೆ. ಅವುಗಳ ಪೈಕಿ ಬಹುಕಾಲದ ಬೇಡಿಕೆ ತೆಂಗು ಪಾರ್ಕ್ ಮೊದಲ ಸ್ಥಾನದಲ್ಲಿದೆ.

ಅತಿ ಹೆಚ್ಚು ತೆಂಗು ಬೆಳೆಯುವ ತುಮಕೂರು ಜಿಲ್ಲೆಯಲ್ಲಿ ತೆಂಗು ಪಾರ್ಕ್ ನಿರ್ಮಿಸಿ ಮೌಲ್ಯವರ್ಧನೆ, ಉತ್ತಮ ಮಾರುಕಟ್ಟೆ, ಸಂಶೋಧನೆ ಒಳಗೊಂಡಂತೆ ಒಂದೇ ಸೂರಲ್ಲಿ 'ಸಮಗ್ರ ತೆಂಗು ಅಭಿವೃದ್ಧಿ'ಗೆ ಉತ್ತೇಜನದ ಒತ್ತಾಸೆಯಿದೆ. ಇದರಿಂದ ರಫ್ತಿಗೆ ಉತ್ತೇಜನ, ಉದ್ಯೋಗ ಸೃಷ್ಟಿಗೂ ದಾರಿ ತೆರೆಯಲಿದೆ.

ಜಿಲ್ಲೆಯಲ್ಲಿ ಈ ಹಿಂದೆ 2.24 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ವಿಸ್ತರಣೆಯಾಗಿತ್ತು. ಆದರೆ ರೋಗಬಾಧೆ, ಇಳುವರಿ ಕುಂಠಿತದಿಂದ 1.76 ಲಕ್ಷ ಹೆಕ್ಟೇರ್‌ಗೆ ಕುಸಿದಿದ್ದು, ಉತ್ತೇಜನದ ಅಗತ್ಯವಿದೆ. ತೆಂಗು ಪಾರ್ಕ್ ಘೋಷಿಸಿದರೆ, ಈ ಎಲ್ಲದಕ್ಕೂ ಬಲ ಸಿಗಲಿದೆ ಎಂಬ ವಿಶ್ವಾಸ ತೆಂಗು ಬೆಳೆಗಾರರದ್ದು.

ತೆಂಗು ಪಾರ್ಕ್ ವಿಶೇಷತೆ: ತೆಂಗು ಸಂಸ್ಕರಣೆ ಘಟಕ, ಕೊಬ್ಬರಿ ಮತ್ತು ತೆಂಗಿನ ಎಣ್ಣೆ ಉತ್ಪಾದನಾ ಘಟಕ, ತೆಂಗಿನ ಚಿಪ್ಪು, ನಾರು ಉತ್ಪನ್ನಗಳಿಗೆ ಪ್ರೋತ್ಸಾಹ, ಕೋಲ್ಡ್ ಸ್ಟೋರೇಜ್ ನಿರ್ಮಾಣ, ರೈತರಿಗೆ ತರಬೇತಿ ಕೇಂದ್ರ ಒಳಗೊಂಡ ಸಮಗ್ರ ಕೇಂದ್ರವೇ 'ತೆಂಗು ಪಾರ್ಕ್' ಇದರಿಂದ ಮಾರುಕಟ್ಟೆ ಸಂಪರ್ಕ ವ್ಯವಸ್ಥೆ ಅಭಿವೃದ್ಧಿಯಾಗುತ್ತದೆ. ರೈತರು ಒಂದೇ ಸ್ಥಳದಲ್ಲಿ ಎಲ್ಲಾ ಸೇವೆಗಳನ್ನು ಪಡೆಯಲು ಸಾಧ್ಯವಾಗುವುದರಿಂದ ಮಧ್ಯವರ್ತಿಗಳ ಹಾವಳಿಗೆ ಬ್ರೇಕ್ ಬೀಳಲಿದೆ ಎಂಬುದು ತಜ್ಞರ ಅಭಿಪ್ರಾಯ.



ಇಲ್ಲಿವೆ ಹೊಸ ಸಾಧ್ಯತೆಗಳು

ನಾರು ಮತ್ತು ಚಿಪ್ಪು	ಗೃಹೋಪಯೋಗಿ ವಸ್ತುಗಳ ತಯಾರಿಕೆಗೆ ಕಚ್ಚಾ ವಸ್ತು.
ಎಳನೀರು ಕೆಫೆ	ಆಧುನಿಕ ಶೈಲಿಯ ಎಳನೀರು ಪಾನೀಯಗಳ ಮಾರುಕಟ್ಟೆ.
ಸಿಹಿ ನೀರಾ	ತೆಂಗಿನಿಂದ ತಯಾರಾಗುವ ನೈಸರ್ಗಿಕ ಪಾನೀಯಕ್ಕೆ ಉತ್ತೇಜನ.

ಎನಿದು ತೆಂಗು ಪಾರ್ಕ್?

ತೆಂಗಿನ ಉತ್ಪನ್ನಗಳ ಸಂಸ್ಕರಣೆ, ಸಂಗ್ರಹಣೆ, ಮೌಲ್ಯವರ್ಧನೆ, ಮಾರುಕಟ್ಟೆ, ಸಂಶೋಧನಾ ಅವಕಾಶವನ್ನು ಒಂದೇ ಸ್ಥಳದಲ್ಲಿ ಒದಗಿಸುವ ಕೈಗಾರಿಕಾ ಕೇಂದ್ರ . ಇದರಿಂದ ರೈತರು ನೇರವಾಗಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ ಸಿಗುತ್ತದೆ.



ತುಮಕೂರಲ್ಲಿ ತೆಂಗು ಪಾರ್ಕ್ ನಿರ್ಮಾಣ ಆಗಬೇಕು. ಇದರಿಂದ ತೆಂಗು ಮೌಲ್ಯವರ್ಧನೆ, ಸಂಶೋಧನೆ, ಮಾರುಕಟ್ಟೆ ವಿಸ್ತರಣೆ ಸಾಧ್ಯವಾಗುತ್ತದೆ. ವಸಂತನರಸಾಪುರ ಕೈಗಾರಿಕಾ ಪ್ರದೇಶದಲ್ಲೂ ಪಾರ್ಕ್ ನಿರ್ಮಿಸಬಹುದು. ವಸಂತನರಸಾಪುರದಲ್ಲಿ ನಿರ್ಮಿಸಿದರೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ, ಆದ್ಯತೆ ಸಿಗುತ್ತದೆ. ತೆಂಗು ಉತ್ತೇಜನ ಕಾರ್ಯಕ್ರಮಗಳಿಗೆ, ಯೋಜನೆಗಳಿಗೆ ಬಲವಾಗುತ್ತದೆ.

- ಎನ್.ಆರ್. ಜಯಕುಮಾರ್ ಅಧ್ಯಕ್ಷ, ತೆಂಗು ಮತ್ತು ಅಡಕೆ ಬೆಳೆಗಾರರ ಸಂಘ



ರೈತರಿಗೆ ಸಿಗುವ ಲಾಭಗಳು

ಮೌಲ್ಯವರ್ಧನೆ	ನೇರ ಕಾಯಿ ಮಾರಾಟಕ್ಕಿಂತ ಉತ್ಪನ್ನಗಳ ಮೂಲಕ ಹೆಚ್ಚಿನ ಲಾಭ.
ಸ್ಥಿರ ಬೆಲೆ	ಮಾರುಕಟ್ಟೆಯ ಏರಿಳಿತದ ನಡುವೆಯೂ ಕೊಬ್ಬರಿಗೆ ಸ್ಥಿರ ಬೆಲೆ ಲಭ್ಯ.
ಮಧ್ಯವರ್ತಿಗಳ ಮುಕ್ತಿ	ರೈತರು ನೇರವಾಗಿ ಮಾರುಕಟ್ಟೆ ಸಂಪರ್ಕ ಪಡೆಯುವುದರಿಂದ ಕಮಿಷನ್ ಏಜೆಂಟ್‌ಗಳ ಕಾಟ ತಪ್ಪಲಿದೆ.
ಉದ್ಯೋಗ ಸೃಷ್ಟಿ	ಸ್ಥಳೀಯ ಯುವಜನತೆಗೆ ಕೃಷಿ ಆಧಾರಿತ ಉದ್ದಿಮೆಗಳಲ್ಲಿ ಕೆಲಸದ ಅವಕಾಶ.

■ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಲಕ್ಷಾಂತರ ತೆಂಗಿನ ಮರಗಳು ರೋಗಬಾಧಿತವಾಗಿವೆ

ರೋಗಪೀಡಿತ ತೆಂಗಿನ ವಿವರ

ಜಿಲ್ಲೆ	ರೋಗಬಾಧಿತ ಮರಗಳ ಸಂಖ್ಯೆ
ಹಾಸನ	12,88,179
ಮೈಸೂರು	6,20,776
ಮಂಡ್ಯ	5,14,156
ತುಮಕೂರು	4,09,440
ಚಿಕ್ಕಮಗಳೂರು	3,94,014
ಚಿತ್ರದುರ್ಗ	2,26,418

ತೋಟಗಾರಿಕೆ ಇಲಾಖೆ ಅಂಕಿ-ಅಂಶ

ನಾರಿಯಲ್ ಸಂವರ್ಧನ್ ಕೇಂದ್ರದ ಬೆಂಬಲ

ಕೇಂದ್ರ ಬಜೆಟ್‌ನಲ್ಲಿ ನಾರಿಯಲ್ ಸಂವರ್ಧನ್ ಯೋಜನೆ ಘೋಷಿಸಿದ್ದು, ತೆಂಗು ತೋಟಗಳ ಪುನಶ್ಚೇತನದ ಭರವಸೆ ಸಿಕ್ಕಿದೆ. ಈ ಯೋಜನೆಗೆ ಬೆಂಬಲವಾಗಿ ರಾಜ್ಯ ಸರಕಾರ ತೆಂಗು ಪಾರ್ಕ್ ನೀಡಿದರೆ ತೆಂಗು ಬೆಳೆಗಾರರಿಗೆ ಜೀವನಪರ್ಯಂತ ಸುಗ್ಗಿ ಎಂದು ವಿಶ್ಲೇಷಿಸಲಾಗುತ್ತಿದೆ. ಜತೆಗೆ ಮೇಕ್ ಇನ್ ಇಂಡಿಯಾ, ಒಡಿಒಪಿ, ಪಿಎಂಎಫ್‌ಇ ನೇರಿದಂತೆ ಸ್ಟಾರ್ಟ್ ಅಪ್ ಯೋಜನೆಗಳು, ಮೌಲ್ಯವರ್ಧನೆ ಉತ್ತೇಜನ ಕಾರ್ಯಕ್ರಮಗಳಿಗೆ ಬಲ ಸಿಗುತ್ತದೆ.

V-karnataka pg 05

UNIVERSITY OF AGRICULTURAL SCIENCES, BANGALORE
Estate Office, GKVK

TENDER NOTIFICATION NO.EO/TN/27/2025-26, DATED: 26.02.2026

Ind Exp pg 06

TENDER NOTIFICATION
(Through e-procurement portal only)

The University of Agricultural Sciences, Bangalore has invited Tender in the prescribed form as per Standard Tender Document KW2 from the registered KPWD/PWD/ Contractors for the works Sl. No.1 and 2. The details of the notification, tender document, specifications are available in the website **www.kppp.karnataka.gov.in.** The cost of tender document is as per e- procurement portal. The EMD has to be paid in the e-procurement portal using e-Procurement payment modes.

The above works are under Two Cover system. The details for two cover system is to be uploaded as per Standard Tender Document.

The Blank Tender Documents can be down loaded from **www.kppp.karnataka.gov.in.** Last date and time for uploading is **07-03-2026** upto 4.00 P.M. The Technical Bid will be opened on **09-03-2026** at 10.30 A.M. The Financial Bid will be opened on **12-03-2026** at 10.30 A.M. For more details please contact e-portal help desk at **support@eprochelpdesk.com** or **8046010000/8068948777** on working days and this office during working hour, Phone No.080-23332765.

Sd/-
ESTATE OFFICER

DIPR/CP/5924/CCL/2025-26

Ind Exp pg 04

ICAR–National Institute of Veterinary Epidemiology and Disease Informatics
Ramagondanahalli, Yelahanka, Bengaluru-560 119, Karnataka

F. No. 12-32/NIVEDI/Estt/Rectt/2025-26(e 377191)/ Dated: 02nd March, 2026

NOTIFICATION

Walk in interview for filling up of various temporary positions under time bound Ad-hoc projects/schemes at ICAR-NIVEDI, Ramagondanahalli, Yelahanka, Bengaluru- 560119 will be held on **12-03-2026 and 16-03-2026**. All desirous and eligible candidates fulfilling criteria are invited to attend the walk-in interview. For educational qualifications, experience and other related information, please visit the institute website **www.nivedi.res.in.**

Sd/-
Director

ತಂಬಾಕು ಮಂಡಳಿ, ಖಾಸಗಿ ಕಂಪನಿ ಪ್ರತಿನಿಧಿಗಳೊಂದಿಗೆ ಕೇಂದ್ರ ಸಚಿವ ಕುಮಾರಸ್ವಾಮಿ ಸಭೆ

ಸರಾಸರಿ ಬೆಲೆಗೆ ತಂಬಾಕು ಖರೀದಿಸಿ: ಎಚ್‌ಡಿಕೆ

ಮೈಸೂರು: ರಾಜ್ಯದ ತಂಬಾಕು ಮಾರುಕಟ್ಟೆಗಳಲ್ಲಿ ರೈತರಿಂದ ಹಿಂದಿನ ಸರಾಸರಿ ಅಥವಾ ಅದಕ್ಕಿಂತ ಹೆಚ್ಚು ಬೆಲೆಗೆ ಉತ್ಪನ್ನ ಖರೀದಿಸಬೇಕು. ತಂಬಾಕು ಮಂಡಳಿಯು ಹರಾಜು ಪ್ರಕ್ರಿಯೆ ಮೇಲೆ ನಿಗಾ ವಹಿಸಬೇಕು ಎಂದು ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್.ಡಿ. ಕುಮಾರಸ್ವಾಮಿ ಸೂಚಿಸಿದರು.

ಕೇಂದ್ರ ತಂಬಾಕು ಮಂಡಳಿಯು ಸೋಮವಾರ ಇಲ್ಲಿ ಆಯೋಜಿಸಿದ್ದ ಜನಪ್ರತಿನಿಧಿಗಳು ಹಾಗೂ ಪ್ರಮುಖ ವರ್ತಕರೊಂದಿಗಿನ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ತಂಬಾಕು ಉತ್ಪನ್ನಗಳಿಗೆ ವಿಧಿಸಲಾಗುತ್ತಿರುವ ತೆರಿಗೆ ಕುರಿತು ದೂರುಗಳಿದ್ದಲ್ಲಿ ಅದನ್ನು ಲಿಖಿತ ರೂಪದಲ್ಲಿ ಸಲ್ಲಿಸಿದರೆ ಕೇಂದ್ರ ಹಣಕಾಸು ಸಚಿವರ ಗಮನಕ್ಕೆ ತಂದು ಪರಿಹಾರಕ್ಕೆ ಪ್ರಯತ್ನಿಸಲಾಗುವುದು. ಆದರೆ ತೆರಿಗೆಯ ನೆಪದಲ್ಲಿ ರೈತರಿಗೆ ಅನ್ಯಾಯ ಆಗದಂತೆ ನೋಡಿಕೊಳ್ಳಿ ಎಂದು ಸೂಚಿಸಿದರು.

ಐಟಿಸಿ ಕಂಪನಿ ಹಿರಿಯ ಅಧಿಕಾರಿ ರವಿ ತಂಬಾಕು ಉತ್ಪನ್ನಗಳಿಗೆ ವಿಧಿಸುತ್ತಿದ್ದ ಜಿಎಸ್‌ಟಿಯನ್ನು ಕೇಂದ್ರವು ಶೇ 18ರಿಂದ ಶೇ 40ಕ್ಕೆ ಏರಿಸಿದೆ. ಸಿಗರೇಟುಗಳ ಮೇಲಿನ ತೆರಿಗೆಯು ದುಪ್ಪಟ್ಟಾಗಿದ್ದು, ಪ್ರತಿ ಸಿಗರೇಟಿನಬೆಲೆ 67 ಜಾಸ್ತಿ ಆಗಿದೆ. ಹೀಗಾಗಿ ಉತ್ಪನ್ನಗಳಿಗೆ ಬೇಡಿಕೆ ಕುಸಿಯುತ್ತಿದ್ದು, ನಾವು ನಿಗದಿತ ಪ್ರಮಾಣಕ್ಕಿಂತ ಕಡಿಮೆ ತಂಬಾಕನ್ನು ಕೊಳ್ಳುವುದು ಅನಿವಾರ್ಯವಾಗಿದೆ. ಆದರೆ ಬೆಲೆಯಲ್ಲಿ ಯಾವುದೇ ವ್ಯತ್ಯಾಸ ಮಾಡಿಲ್ಲ ಎಂದರು.

ಎಫ್‌ಡಿಎಗೆ ಒಲವು: ಮೈಸೂರು ಜಿಲ್ಲೆಯ ಮಾರುಕಟ್ಟೆಗಳಲ್ಲಿ ಐಟಿಸಿ ಕಂಪನಿಯು ಏಕಸ್ವಾಮ್ಯ ಸಾಧಿಸಿದ್ದು, ಇದರಿಂದ ರೈತರಿಗೆ ನ್ಯಾಯಯುತ ಬೆಲೆ ಸಿಗುತ್ತಿಲ್ಲ. ತಂಬಾಕಿಗೆ ಸ್ಪರ್ಧಾತ್ಮಕ ದರ ಒದಗಿಸುವ ಸಲುವಾಗಿ ಎಫ್‌ಡಿಎ ಮೂಲಕ ವಿದೇಶಿ ಕಂಪನಿಗೂ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಬೇಕು ಎಂದು ರೇಷ್ಮೆ ಮತ್ತು ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್ ಒತ್ತಾಯಿಸಿದರು.

ಚಾಮರಾಜನಗರ ಸಂಸದ ಸುನಿಲ್ ಬೋಸ್, ಶಾಸಕರಾದ ಎ. ಮಂಜು, ಜಿ.ಡಿ. ಹರೀಶ್ ಗೌಡ, ರವಿಶಂಕರ್, ವಿಧಾನ ಪರಿಷತ್ ಸದಸ್ಯರಾದ ಸಿ. ಎನ್. ಮಂಜೇಗೌಡ, ಕೆ. ವಿವೇಕಾನಂದ ಪಾಲ್ಗೊಂಡರು.



ಮೈಸೂರಿನಲ್ಲಿ ಸೋಮವಾರ ಕೇಂದ್ರ ತಂಬಾಕು ಮಂಡಳಿ ಆಯೋಜಿಸಿದ್ದ ಜನಪ್ರತಿನಿಧಿಗಳ ಸಭೆಯಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾತನಾಡಿದರು.

> ರಾಜ್ಯದಲ್ಲಿ ಈ ವರ್ಷ 8.5 ಕೋಟಿ ಕೆ.ಜಿ.ಯಷ್ಟು ತಂಬಾಕು ಬೆಳೆದಿದ್ದು, ಇದರಲ್ಲಿ 4 ಕೋಟಿ ಕೆ.ಜಿ.ಯಷ್ಟು ಉತ್ಪನ್ನ ಈಗಾಗಲೇ ಕಡಿಮೆ ಬೆಲೆಗೆ ಹರಾಜಾಗಿದೆ. ಉಳಿದ ಉತ್ಪನ್ನವನ್ನು ಹರಾಜು ಆರಂಭವಾದ ದಿನದ ಸರಾಸರಿ ಅಥವಾ ಅದಕ್ಕಿಂತ ಹೆಚ್ಚು ಬೆಲೆಗೆ ಖರೀದಿಸಿ.
> -ಯದುವೀರ್ ಕೃಷ್ಣದತ್ತ ಒಡೆಯರ್, ಸಂಸದ

ಎಲ್ಲ ಸರಕಾರದಲ್ಲೂ ಫೋನ್ ಟ್ಯಾಪಿಂಗ್ ಇತ್ತು

ರಾಜ್ಯದಲ್ಲಿ ಎಲ್ಲ ಸರಕಾರಗಳ ಅವಧಿಯಲ್ಲೂ ಫೋನ್ ಟ್ಯಾಪಿಂಗ್ ಇತ್ತು. ಆದರೆ ಅವರದ್ದೇ ಶಾಸಕರುಸಚಿವರ ಮೇಲೆ ಗುಪ್ತಚಾರಿಕೆ ಮಾಡುತ್ತಿರುವುದು ಇದೇ ಮೊದಲು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು. ಮೈಸೂರಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಕೆಲವರು ಫೋನ್ ಟ್ಯಾಪಿಂಗ್ ಮಾಡಿಯೂ ಪತಿವ್ರತೆಯರಂತೆ ನಡೆದುಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ ನಾನು ಸತ್ಯವನ್ನೇ ಹೇಳುತ್ತಿದ್ದೇನೆ. ಕದ್ದಾಲಿಕೆ ಆಗಲೂ ಇತ್ತು, ಈಗಲೂ ಇದೆ. ಆದರೆ ಕೆಲವೊಮ್ಮೆ ವಿಷಯಗಳು ಹೊರಗೆ ಬಂದು ಕೆಲವರ ತಲೆ ಉರುಳುತ್ತವೆ. ಇವತ್ತಿನ ಸರ್ಕಾರದಲ್ಲಿ ಅದು ಎಷ್ಟು ಜಾಸ್ತಿಯಾಗಿದೆ ಎಂದು ಅವರನ್ನೇ ಕೇಳಬೇಕು. ಮುಖ್ಯಮಂತ್ರಿಯದ್ದು ಒಂದು ಗುಂಪು, ಮುಖ್ಯಮಂತ್ರಿ ಆಗಬೇಕು ಎಂದುಕೊಂಡವರದ್ದು ಒಂದು ಗುಂಪು ಪರಸ್ಪರ ಗೂಢಚಾರಿಕೆ ನಡೆಸುತ್ತಿರುವುದು ದುರಂತ ಎಂದರು.

ಮದ್ದೂರು ನಗರಸಭೆ 4 ಗ್ರಾಮ ಕೈಬಿಡಿ

ಮಂಡ್ಯ: ಗೆಜ್ಜಲಗೆರೆ, ಗೊರವನಹಳ್ಳಿ, ಚಾಮನಹಳ್ಳಿ, ಸೋಮನಹಳ್ಳಿ ಈ ನಾಲ್ಕು ಗ್ರಾಮಗಳನ್ನು ಸ್ಥಳೀಯರ ಆಕ್ಷೇಪಣೆಯ ಹಿನ್ನೆಲೆಯಲ್ಲಿ ವಿರುದ್ಧವಾಗಿ ಮದ್ದೂರು ನಗರಸಭೆ ವ್ಯಾಪ್ತಿಗೆ ಸೇರಿಸಲಾಗಿದೆ. ಕೂಡಲೇ ರಾಜ್ಯ ಸರಕಾರ ಈ ನಿರ್ಧಾರವನ್ನು ಕೈಬಿಡಬೇಕು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. ಜನಾಭಿಪ್ರಾಯ ಪರಿಗಣಿಸದೆ ಏಕಪಕ್ಷೀಯವಾಗಿ ಸಂಪುಟ ಸಭೆಯಲ್ಲಿ ಕೂಡ ನಿರ್ಣಯ ಕೈಗೊಳ್ಳಲಾಗಿದೆ ಎಂದು ಕೇಳಿದ್ದೇನೆ. ಸರಕಾರ ಜನತೆಯ ನಿಲುವುಗಳಿಗೆ ವಿರುದ್ಧವಾಗಿ ಹೋಗಬಾರದು. ಈ ಹಿನ್ನೆಲೆಯಲ್ಲಿ ತಾವು ಮಧ್ಯಪ್ರವೇಶ ಮಾಡಿ ಇದಕ್ಕೆ ತಡೆಯೊಡ್ಡಬೇಕು ಎಂದು ಕೋರಿದ್ದಾರೆ. ರೈತ ನಾಯಕ ಸುನಂದಾ ಜಯರಾಂ ನೇತೃತ್ವದಲ್ಲಿ 70 ದಿನಗಳಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಯುತ್ತಿದೆ. ಈ ಭಾಗದ ಎಲ್ಲ ಗ್ರಾಮಗಳು ಕೃಷಿ ಆಧರಿತವಾಗಿದ್ದು, ಸುಮಾರು 2,000 ಎಕರೆಗೂ ಹೆಚ್ಚು ಭೂಮಿ ನೀರಾವರಿ ಪ್ರದೇಶವಾಗಿರುತ್ತದೆ ಎಂಬುದು ಗಮನಾರ್ಹ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

Viswavani Pg 05

Hosadiganta Pg 10

ಗೋಕೃಪಾಮೃತ ಭೂಮಿಗೆ ಅಮೃತ

ಧರಣಿ ಮಂಡಲ
•ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com



ಒಂದು ಸಮೀಕ್ಷೆಯ ಪ್ರಕಾರ ಭಾರತದಲ್ಲಿ ಪ್ರತಿವರ್ಷ ಸುಮಾರು ಮೂರು ಲಕ್ಷ ಕೋಟಿ ರೂಪಾಯಿಗಿಂತ ಹೆಚ್ಚು ಹಣವನ್ನು ಯೂರಿಯಾಗಾಗಿ ಖರ್ಚು ಮಾಡಲಾಗುತ್ತಿದೆ. ಇದರೊಂದಿಗೆ ಹಲವು ಲಕ್ಷ ಕೋಟಿ ರೂಪಾಯಿಗಳನ್ನು ಕೀಟನಾಶಕಗಳಿಗಾಗಿ ವ್ಯಯ ಮಾಡಲಾಗುತ್ತಿದೆ. ಹಾಗೆಯೇ ದೇಶದಲ್ಲಿ ಶೇಕಡಾ 80ಕ್ಕಿಂತ ಹೆಚ್ಚು ರೈತರು ಕೇವಲ ಎರಡು ಎಕರೆಗಿಂತ ಕಡಿಮೆ ವಿಸ್ತೀರ್ಣವಿರುವ ಭೂಮಿಯಲ್ಲಿ ಇಂದಿಗೂ ಕೃಷಿಯನ್ನು ಮಾಡುತ್ತಿದ್ದಾರೆ. ಹೀಗೆ ಎರಡು ಎಕರೆಯಲ್ಲಿ ಕೃಷಿ ಮಾಡುತ್ತಿರುವ ಎಲ್ಲಾ ರೈತರಿಗೆ ಐದು ಎಕರೆಯಲ್ಲಿ ಸಿಗುವಷ್ಟು ಫಸಲು ದೊರಕಿಸಿಕೊಡಬೇಕೆಂಬ ಛಲದಲ್ಲಿ ಹುಟ್ಟಿದ್ದೇ ಗೋಕೃಪಾಮೃತ ಎಂಬ ಬೆಲೆ ಕಟ್ಟಲಾಗದ ದ್ರಾವಣ.

ಈ ದ್ರಾವಣದ ಕರ್ತೃ ಗುಜರಾತಿನ ಗಾಂಧಿನಗರದಲ್ಲಿರುವ ಬನ್ಸಿ ಗೀರ್ ಗೋಶಾಲೆಯ ಸ್ಥಾಪಕರಾದ ಗೋಪಾಲ್ ಸುತಾರಿಯಾರವರು. ಯಾವುದು ರೈತರಿಗೆ ಇಂದು ಹೊರೆಯಂತೆ ಕಾಣುತ್ತಿದೆಯೋ ಅದನ್ನೇ ಕೇಂದ್ರವಾಗಿಟ್ಟುಕೊಂಡು ರೈತರು ಸ್ವಾಭಿಮಾನದಿಂದ ಕೃಷಿಯನ್ನು ಮಾಡುತ್ತಾ ಹೊಸ ಭಾರತದ ನಿರ್ಮಾಣವನ್ನು ಮಾಡಬೇಕು ಎಂಬ ಉದ್ದೇಶವನ್ನಿಟ್ಟುಕೊಂಡೇ ಈ ಅದ್ಭುತ ದ್ರಾವಣವನ್ನು ಗೋಪಾಲ್ ಸುತಾರಿಯರವರು ಹುಟ್ಟುಹಾಕಿದ್ದಾರೆ. ಅವರೇ ಹೇಳುವಂತೆ ಪಂಚಗವ್ಯದಲ್ಲಿರುವ ಔಷಧೀಯ ತತ್ವಗಳಿಂದಲೇ ಈ ಗೋಕೃಪಾಮೃತದ ಸಂಶೋಧನೆಯಾಗಿದೆಯಂತೆ. ಇವರು ಈ ದ್ರಾವಣವನ್ನು ಹುಟ್ಟುಹಾಕುವ ಮುಖ್ಯ ಉದ್ದೇಶ ದೇಶಿ ಗೋತಳಿಗಳ ರಕ್ಷಣೆ ಮತ್ತು ಅದರ ಮಹತ್ವವನ್ನು ಜಗಜ್ಜಾಹೀರುಪಡಿಸುವುದಾಗಿತ್ತು. ದೇಶಿ ಗೋವುಗಳು ಹಾಲು ಕೊಡದೇ ಇದ್ದರೂ ಸಹ ಅದರ ಗೋಮೂತ್ರ ಮತ್ತು ಗೋಮಯ ಹೊಲಗಳಲ್ಲಿ ಬಂಗಾರವನ್ನು ಬೆಳೆಯುತ್ತದೆ ಎಂಬುದನ್ನು ದೇಶದ ರೈತರಿಗೆ ತೋರಿಸಿಕೊಡಬೇಕಾಗಿತ್ತು. ಯೂರಿಯಾ, ಡಿಎಪಿ ಮತ್ತು ಕೀಟನಾಶಕಗಳಿಲ್ಲದೆ ಕೇವಲ ದೇಶಿ ಗೋವಿನ ಉತ್ಪನ್ನಗಳಿಂದಲೇ ಉತ್ತಮ ಫಸಲನ್ನು ಪಡೆಯಬಹುದು ಎಂಬುದನ್ನು ಸಾಬೀತುಪಡಿಸಬೇಕಾಗಿತ್ತು.

ಭೂಲೋಕದ ಈ ಅಮೃತ ಹೊರಬಂದಿದ್ದು ಇವರ ಸತತ ಏಳು ವರ್ಷಗಳ ನಿರಂತರ ಪ್ರಯೋಗಗಳಿಂದ. 2019ರ ಜೂನ್ ನಂತರವೇ ಇದು ಸಾರ್ವಜನಿಕರಿಗೆ ಮತ್ತು ರೈತರಿಗೆ ಲಭ್ಯವಾಯಿತು. ಪ್ರಾರಂಭದಲ್ಲಿ ಸುಮಾರು 450ಕ್ಕೂ ಹೆಚ್ಚು ದೇಶಿ ಗೋವುಗಳ ಗೋಮೂತ್ರದ ಮೇಲೆ ಇದಕ್ಕಾಗಿ ಸತತ ಸಂಶೋಧನೆಯನ್ನು ಮಾಡಲಾಗಿದೆ. ಹೀಗೆ ಗೋಮೂತ್ರವನ್ನು ನಾನಾ ಪರೀಕ್ಷೆಗಳಿಗೆ ಒಳಪಡಿಸಿದಾಗ ಅದರಲ್ಲಿ ಸುಮಾರು 5100 ಪ್ರಕಾರದ ಪೋಷಕಾಂಶಗಳು ಇದ್ದದ್ದು ಇವರಿಗೆ ಕಂಡು ಬಂದಿದೆ. ಇದರಿಂದ ತಿಳಿದಿದ್ದೇನೆಂದರೆ ಇಂದಿನವರೆಗೆ ಪ್ರಪಂಚದಲ್ಲಿ ಎಲೋಪತಿಯಲ್ಲಿ ಎಷ್ಟು ಪೋಷಕ ತತ್ವಗಳು ಆರೋಗ್ಯಕ್ಕೆ ಅವಶ್ಯಕವೆಂದೂ ಹೇಳಲಾಗಿದೆಯೋ ಅವೆಲ್ಲವೂ ಗೋಮೂತ್ರದಲ್ಲಿ ಪ್ರಾಕೃತಿಕ ರೂಪದಲ್ಲಿ ಇವೆ ಎಂಬುದು. ನಂತರ ಸ್ವರ್ಣಕ್ಷಾರವನ್ನು ಹೊಂದಿರುವ ಕೆಲ ಅಪರೂಪ ಗೋವುಗಳ ಗೋಮೂತ್ರ, ಗೋಮಯ ಮತ್ತು ಪಂಚಗವ್ಯವನ್ನು ಪ್ರತ್ಯೇಕವಾಗಿ ಹೂವಿನ ಕುಂಡಗಳಲ್ಲಿ ಹಾಕಿ ಪರೀಕ್ಷೆಗೆ ಒಳಪಡಿಸಿದಾಗ ಅದರಲ್ಲಿ ಎರೆಹುಳುಗಳ ಪ್ರಮಾಣ ಹೆಚ್ಚಾಗತೊಡಗಿದ್ದು ಕಂಡುಬಂದಿದೆ. ಇದರೊಂದಿಗೆ ಗಿಡಗಳ ಬಣ್ಣ ಹಾಗೂ ರೂಪವು ಸಹ ಬದಲಾಗಿದೆ. ಅವುಗಳ ಈ ಬೆಳವಣಿಗೆಗೆ ಯಾವುದೇ ರೀತಿಯ ಯೂರಿಯಾ, ಡಿಎಪಿ ಅಥವಾ ಕೀಟನಾಶಕದ ಅವಶ್ಯಕತೆ ಕಂಡುಬರಲಿಲ್ಲ. ಇದರಿಂದ ಉತ್ತೇಜನಗೊಂಡ ಇವರು ಇದರ ಮೇಲೆ ಇನ್ನಷ್ಟು ಪ್ರಯೋಗಗಳನ್ನು ಮಾಡಲು ಪ್ರಾರಂಭಿಸಿದರು.

ಮುಂದುವರೆದ ಸತತ ಪ್ರಯೋಗಗಳಿಂದ ಇವರು ಕಂಡುಕೊಂಡಿದ್ದೇನೆಂದರೆ, ದೇಶಿ ಗೋವಿನಿಂದ ಸಿದ್ಧವಾದ ಮೊಸರಿನಲ್ಲಿ ಬೆಳೆಗೆ ಸಹಾಯ ಮಾಡುವ ಒಂದಷ್ಟು ಪ್ರೋಬಯೋಟಿಕ್ ಬ್ಯಾಕ್ಟೀರಿಯಾಗಳು ಅಂದರೆ ಮಿತ್ರ ಜೀವಾಣುಗಳು ಇರುತ್ತವೆ ಎಂಬುದು. ಆಚ್ಛರಿ ಎಂದರೆ ಇದೇ ಜೀವಾಣುಗಳು ನಮ್ಮ ಶರೀರದಲ್ಲಿ ಜೀರ್ಣಕ್ರಿಯೆಯ ಕಾರ್ಯವನ್ನು ಮಾಡುತ್ತವೆ. ಒಂದು ಗ್ರಾಂ ಗೋಮಯದಲ್ಲಿ ನಮ್ಮ ಶರೀರಕ್ಕೆ ಉಪಯುಕ್ತವಾದ ಸುಮಾರು ನೂರು ಕೋಟಿಯಿಂದ ನಾಲ್ಕು ಸಾವಿರ ಕೋಟಿಯವರೆಗೂ ಜೀವಾಣುಗಳು ಇರುತ್ತವೆ. ಇದರೊಂದಿಗೆ ಕೆಲವು ರೋಗಜನಕ ಜೀವಾಣುಗಳು ಸಹ ಇದ್ದು, ಇವು ನಮ್ಮ ದೇಹದಲ್ಲಿ ರೋಗ ಪ್ರತಿರೋಧಕಶಕ್ತಿಯನ್ನು ಹೆಚ್ಚಿಸುವಲ್ಲಿ ಸಹಾಯ ಮಾಡುತ್ತವೆ. ಹೀಗೆ ನಮ್ಮ ದೇಹಕ್ಕೆ ಪೂರಕವಾಗಿರುವ ಮಿತ್ರ ಜೀವಾಣುಗಳೊಂದಿಗೆ ಪಂಚಗವ್ಯವನ್ನು ಅಥವಾ ದೇಶಿ ಗೋವಿನ ಉತ್ಪನ್ನಗಳನ್ನು ಮಿಶ್ರಣ ಮಾಡಿದಾಗ ಅದು ತನ್ನ ರೂಪವನ್ನು ಬದಲಿಸಿದ್ದು ಇವರಿಗೆ ಕಂಡು ಬಂತು. ಆನಂತರ ನಡೆದ ಕೆಲ ಫಲಪ್ರದ ಪ್ರಯೋಗಗಳಿಂದ ಹುಟ್ಟಿದ್ದೇ ಗೋಕೃಪಾಮೃತ.



ಗೋಕೃಪಾಮೃತವನ್ನು ಸರಳ ಸ್ವರೂಪದಲ್ಲಿ ರೈತರಿಗೆ ತಲುಪಿಸಬೇಕು ಮತ್ತು ರೈತರು ಇದರ ಉಪಯೋಗವನ್ನು ಮಾಡಬೇಕು ಎಂಬುದು ಗೋಪಾಲ್‌ಸುತಾರಿಯರವರಉದ್ದೇಶವಾಗಿತ್ತು. ಗೋಮಾತೆಯ ಕೃಪೆಯಿಂದಲೇ ಈ ದ್ರಾವಣ ಪ್ರಾಪ್ತವಾಗಿರುವುದರಿಂದ ಇದಕ್ಕೆ ಗೋಕೃಪಾಮೃತ ಎಂಬ ಹೆಸರನ್ನೇ ಇವರು ಇಟ್ಟಿದ್ದು ವಿಶೇಷ. ಈ ದ್ರಾವಣವನ್ನು ಸಮಾಜದ ಮುಂದಿಡಬೇಕಾದರೆಎಲ್ಲಾರೀತಿಯವೈಜ್ಞಾನಿಕ ಸಂಶೋಧನೆಗಳಿಗೆ ಇದನ್ನು ಒಳಪಡಿಸಲಾಗಿತ್ತು. ಆಗ ಇದರಲ್ಲಿ ಸುಮಾರು ಎಂಟಕ್ಕೂ ಹೆಚ್ಚು ಪ್ರಕಾರದ ಬ್ಯಾಕ್ಟೀರಿಯಾಗಳು ಪ್ರಾಕೃತಿಕವಾಗಿ ಗಾಳಿಯಿಂದ ನೈಟ್ರೋಜನ್‌ನ್ನು ಹೀರಿಕೊಂಡು ಗಿಡದ ಬೇರುಗಳಿಗೆ ಒದಗಿಸುವುದು ಕಂಡುಬಂದಿದೆ. ಇದರಿಂದ ಆರಕ್ಕೂ ಹೆಚ್ಚು ಪ್ರಕಾರದಬ್ಯಾಕ್ಟೀರಿಯಾಗಳುರೋಗನಿಯಂತ್ರಕಮತ್ತುಕೀಟನಿಯಂತ್ರಕವಾಗಿ ಕೆಲಸ ಮಾಡುವುದು ಸ್ಪಷ್ಟವಾಗಿದೆ. ಈ ಆರು ಪ್ರಕಾರದ ಬ್ಯಾಕ್ಟೀರಿಯಾಗಳನ್ನು ವೈಜ್ಞಾನಿಕ ಭಾಷೆಯಲ್ಲಿ ಮಿತ್ರ ಜೀವಾಣುಗಳೆಂದು ಕರೆಯಲಾಗುತ್ತದೆ. ಇವು ಗೋಮಯ, ಗೋಮೂತ್ರ ಮತ್ತು ಭೂಮಿಯಲ್ಲಿರುವ ಧಾತು ಮತ್ತು ಖನಿಜ ಪದಾರ್ಥಗಳನ್ನು ಬೇರುಗಳಿಗೆ ಒದಗಿಸುವ ಕಾರ್ಯವನ್ನು ಮಾಡುತ್ತವೆ. ಇದರಲ್ಲಿ ಸಲ್ಫರ್‌ಒದಗಿಸುವ ಹಲವಾರು ಬ್ಯಾಕ್ಟೀರಿಯಾಗಳಿದ್ದು, ಬೆಳೆಗಳಿಗೆ ಬಹುಪಯೋಗಿಯಾಗಿರುವುದು ದೃಢಪಟ್ಟಿದೆ. ಈ ಬ್ಯಾಕ್ಟೀರಿಯಾಗಳು ಗೊಬ್ಬರವನ್ನು ಕಾಂಪೋಸ್ಟ್ ಆಗಿ ಪರಿವರ್ತಿಸುವ ಕೆಲಸವನ್ನು ಮಾಡುತ್ತವೆ. ಇದರೊಂದಿಗೆ ರೋಗವನ್ನು ಹರಡುವ ಕೀಟಾಣುಗಳನ್ನು ನಿಯಂತ್ರಣ ಮಾಡುವ ಬ್ಯಾಕ್ಟೀರಿಯಾಗಳು ಇದರಲ್ಲಿರುವುದು ಸಾಬೀತಾಗಿದೆ.

ಅಷ್ಟೇ ಅಲ್ಲದೆ ಇದರಲ್ಲಿ ಸುಮಾರು 12 ಪ್ರಕಾರದ ಬ್ಯಾಕ್ಟೀರಿಯಾಗಳು ಭೂಮಿಯಿಂದ ವಿಷಯುಕ್ತ ಪದಾರ್ಥಗಳನ್ನು ನಷ್ಟ ಮಾಡುವ ಕೆಲಸವನ್ನು ಮಾಡುವುದುಆಚ್ಚರಿ ಮೂಡಿಸಿದೆ.

ಒಂದು ಲೀಟರ್ ಈ ಗೋಕೃಪಾಮೃತವನ್ನು 200 ಲೀಟರ್ ನೀರಿನಲ್ಲಿ ಬೆರೆಸಿದಾಗ ಈ ಮಿಶ್ರಣದ ಒಂದು ಮಿಲಿ ಲೀಟರ್ ನೀರಿನಲ್ಲಿ ಜೀವಾಣುಗಳ ಸಂಖ್ಯೆ ಹೆಚ್ಚು ಕಡಿಮೆ ಹದಿಮೂರು ಸಾವಿರದಷ್ಟಾಗಿರುವುದು ಕಂಡುಬಂದಿದೆ. ಆನಂತರ ಇದು ಒಂದು ವಾರದಲ್ಲಿ ರಾಸಾಯನಿಕ ಮುಕ್ತ ಬೆಲ್ಲ ಮತ್ತು ದೇಶಿ ಗೋವಿನ ಮಜ್ಜಿಗೆಯ ಉಪಯೋಗದಿಂದ ಹದಿನೆಂಟು ಲಕ್ಷಕ್ಕಿಂತ ಹೆಚ್ಚಾದದ್ದು ಗೋವಿನ ಮಜ್ಜಿಗೆಯ ಉಪಯೋಗದಿಂದ ಹದಿನೆಂಟು ಲಕ್ಷಕ್ಕಿಂತ ಹೆಚ್ಚಾದದ್ದು ಸಂಶೋಧನಾ ವರದಿಯಿಂದ ಸ್ಪಷ್ಟವಾಗಿದೆ. ವಿಶೇಷವೆಂದರೆ ಇದರಲ್ಲಿ ಬೆಳೆಗೆ ಅತ್ಯಂತ ಪೂರಕವಾದ ಜೀವಾಣುಗಳು ಅತಿ ವೇಗವಾಗಿ ವೃದ್ಧಿಹೊಂದಿದ್ದು ದೃಢಪಟ್ಟಿದೆ. ಮುಖ್ಯವಾಗಿ ರೋಗಜನಕಜೀವಾಣುಗಳನ್ನು ಇವು ಬೆಳೆಯಲು ಬಿಡದೇ ಇರುವುದು ಸಾಬೀತಾಗಿದೆ. ಹಾಗೆಯೇ ಇದರಲ್ಲಿ ಸಾಮಾನ್ಯವಾಗಿ ಮೂರು ಪ್ರಕಾರದ ಫಾಸ್ಪರಸ್‌ನ ಜೀವಾಣುಗಳು ಕಂಡುಬಂದಿದ್ದು, ಅದರಲ್ಲಿ ಆರರಿಂದ ಏಳು ಪ್ರಕಾರದ ಜೀವಾಣುಗಳು ಕೀಟನಾಶಕದ ಕೆಲಸವನ್ನು ಮಾಡುವುದು ಸಾಬೀತಾಗಿದೆ.

ಈ ಗೋಕೃಪಾಮೃತದ ಬಳಕೆ ಇತ್ತೀಚಿನ ದಿನಗಳಲ್ಲಿ ಅವಶ್ಯಕವಿದೆಯೇ ಎಂಬ ಪ್ರಶ್ನೆ ಸಾಮಾನ್ಯವಾಗಿ ಉದ್ಭವಿಸುತ್ತದೆ. ನಿಮಗೊಂದು ವಿಚಾರ ತಿಳಿದಿರಲಿ. ಸಂಪೂರ್ಣ ಭಾರತವಿಂದು ಅತಿ ಹೆಚ್ಚಿನ ಪ್ರಮಾಣದಲ್ಲಿ ರಾಸಾಯನಿಕ ಮತ್ತು ರಾಸಾಯನಿಕವನ್ನು ಬಳಸಿ ಬೆಳೆದ ಆಹಾರವನ್ನು ಸೇವಿಸುತ್ತಿದೆ. ಇದರಿಂದ ಕ್ಯಾನ್ಸರ್ ಸೇರಿದಂತೆ ನಾನಾ ಭೀಕರ ರೋಗಗಳು ದೇಶಾದ್ಯಂತ ತಾಂಡವವಾಡುತ್ತಿವೆ. ಮತ್ತೊಂದೆಡೆ ದೇಶದಲ್ಲಿ ಕಳೆದ 20 ವರ್ಷಗಳಲ್ಲಿ ಸುಮಾರು 3 ಲಕ್ಷ ರೈತರು ನಾನಾ ಕಾರಣಗಳಿಂದಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇನ್ನು ಬೆಲೆ ಕಟ್ಟಲಾಗದ ದೇಶಿ ಗೋವಿನ ಹಲವು ತಳಿಗಳು, ದೇಶಿ ಬೀಜಗಳು ಇನ್ನಿಲ್ಲವಾಗಿವೆ. ದಿನದಿಂದ ದಿನಕ್ಕೆ ಅಂತರ್ಜಲ ಮತ್ತು ಫಲವತ್ತಾದ ಮಣ್ಣು ಕಣ್ಮರೆಯಾಗುತ್ತಿದೆ. ಕ್ರಮೇಣ ಗ್ರಾಮಗಳು ಖಾಲಿಯಾಗುತ್ತಿದ್ದು, ಕೇವಲ ವಯೋ ವೃದ್ಧರಷ್ಟೇ ಕಂಡು ಬರುವಂತಾಗಿದೆ. ಯುವಜನತೆ ನಗರಗಳ ಕಡೆಗೆ ಗುಳೆ ಹೊರಡುವುದು ಸಾಮಾನ್ಯವಾಗಿದೆ. ಇದರಿಂದ ಸಹಜವಾಗಿ ನಗರಗಳು ಕಿಕ್ಕಿರಿದು ತುಂಬುತ್ತಿವೆ. ಒಂದು ವಾಕ್ಯದಲ್ಲಿ ಹೇಳಬೇಕೆಂದರೆ ಕಾಗದದ ಹಣವನ್ನು ಬಳಸಿಕೊಂಡು ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಪ್ರಕೃತಿಯನ್ನು ಮನುಷ್ಯ ಇನ್ನಿಲ್ಲವಾಗಿಸುತ್ತಿದ್ದಾನೆ. ನಿಜವಾದ ಹಣವೆಂದರೆ ಭೂಮಿ ಮತ್ತು ಗೋವುಗಳು ಎಂಬುದನ್ನು ಶಾಶ್ವತವಾಗಿಮನುಷ್ಯ ಮರೆಯುತ್ತಿದ್ದಾನೆ. ಮುಖ್ಯವಾಗಿ ಆಧುನಿಕ ಆರ್ಥಿಕತೆಯಿಂದ ಉಂಟಾದ ಒತ್ತಡದಿಂದಾಗಿ ಹೆಚ್ಚಿನ ಯುವಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಅತಿಗಂಭೀರ ವಿಚಾರವಾಗಿದೆ. ಹೀಗಾಗಿ ಗೋವು ಮತ್ತು ರೈತನ ಸಹಭಾಗಿತ್ವದೊಂದಿಗೆಪ್